THE HINDU
Online Newspaper Clipping Service
Dtd-Thursday, 26th, July- 2018
Page No. 06

# Fee regulatory panel pulls up deemed, pvt. universities

STAFF REPORTER
BENGALURU

The fee regulatory committee has pulled up deemed and private universities in the State for allegedly violating the fee structure fixed by them.

The panel has issued the proceedings to 15 deemed universities and private institutions. While only one of them has been allowed to hike fees by 8% compared to the previous year, all the other institutions have been asked to follow last year's fee structure as they did not submit their balance sheets.

- While only one institution has been allowed to hike fees by 8% compared to the previous year, all the others have been asked to follow last year's fee structure as they did not submit their balance sheets.

Committee chairman and former judge D.V. Shylendra Kumar said that they would penalise these institutions if they failed to comply with the committee's orders. "The State government can penalise these institutions or even recommend to disaffiliate them," he said. However, deemed university representatives said that they fall under the purview of the University Grants Commission and they had approached the court against the fee regulatory committee's orders.

Meanwhile, the admission overseeing committee headed by Justice B. Manohar has issued notices to two engineering colleges for allegedly charging excess fee from students. They said they would initiate action once they receive a response from the college.

# Panel rejects fee hike proposals of 14 deemed-to-be universities

## Says They Failed To Give Details Of Expenditure

TIMES NEWS NETWORK



**Bengaluru:** The fee regulatory committee (FRC) under the Karnataka Examinations Authority (KEA) has disapproved the fee hike proposals of 14 out of 15 deemed-to-be universities running professional courses in the state. These colleges, say the committee members, failed to furnish details of their audited expenditure and development plans which are essential for fixing the fee.

"These colleges came for the hearing and claimed that they come under the UGC (University Grants Commission) regulations of fee fixation, have their own in-house fee fixation committees and are not bound by the Karnataka Professional Educational Institutions (Regulation of Admission of Determination fee) Act-2006 to abide by our recommendations. But we pointed out that the Act does not exclude them. We rejected their proposals because they did not furnish the original audited copies of expenditure. The medical or dental colleges did not reveal income from their attached hospitals. They furnished expenditure on the hospitals as part of the expenditure for students," said Justice DV Shylendra Kumar, retired high court judge and chairman of the FRC.

Only Dayananda Institute of Yogic Sciences accepted that it comes under the state's Act, following which the committee approved a fee hike of 8%. "There are many anomalies with respect to the disclosures made by engineering colleges. Many colleges admitted that a maximum fee hike of 8% is enough as the demand for some disciplines is less and admissions have dropped drastically. This is the case with most institutions. Some colleges demanded a hike of up to 300%," he added.

He said this is for the first time that the committee has capped the fee hike for all professional and technical courses in professional colleges.

### 37 colleges give no documents

The panel said of 200 engineering colleges that attended the fee-revision hearing, 163 submitted details of their expenditure and future investment plans. While 37 colleges did not give a single document sought by the panel. It said 32 out of 36 dental colleges and 27 out of 30 medical colleges, 35 out of 58 pharmacy colleges and 42 out of 55 unani colleges furnished details.

## '1-yr rural stint must for govt quota medicos'

**Bengaluru:** Candidates who have secured seats through the government quota in medical colleges will have to serve in rural hospitals for a minimum of one year, and related rules will be framed shortly, said chief minister HD Kumaraswamy on Wednesday. This applies to both government and private colleges.

After inaugurating the cardiac MRI facility at Jayadeva Institute of Cardio Vascular Sciences and Research, the CM said: "Young doctors must work in rural areas and treat the poor. This will become mandatory in Karnataka in sometime." He also promised to strengthen laws to check attacks against doctors.

Referring to the budget allocation of Rs 30 crore for organ transplants, he said the project will be named as marujanma (rebirth), as suggested by the director of Jayadeva institute Dr CN Manjunath. TNN

DECCAN HERALD



# 82 institutions in state not eligible for 8% fee hike

## They failed to submit their accounts

Sandesh M S

**BENGALURU, DHNS: As many as 82 institutions in Karnataka have been declared ineligible for the 8% fee hike recommended by the fee regulatory committee recently for the current academic year 2018-19. The list of such institutions includes engineering, dental, medical, pharmacy, Ayurveda and homoeopathy colleges.**

The fee regulatory committee headed by former Karnataka High Court judge Shylendra Kumar had fixed the 8% fee hike for institutions offering various courses that include deemed universities, private universities and private colleges. All colleges offering Unani and naturopathy and yogic science courses in the state were eligible for the fee hike.

Addressing reporters on Wednesday, Justice Kumar clarified that the 8% fee hike was recommended by the committee based on the Karnataka Private Educational Institutions Act (regulation of admission and determination of fee). "We had asked all the institutions to submit their accounts. Out of 394 institutions in various streams, 82 institutions did not submit their accounts. Hence we declared them to be non-eligible for the 8% fee hike and ordered them to go ahead with the admission process with the previous year's fee structure," Justice Kumar said.

If these ineligible institutions go ahead with the 8% fee hike or demand more than the previous year's fee, they will be penalised.

"The managements had quoted various reasons like future development, infrastructure, facilities etc justifying the fee hike. However, it is not possible to give more than 8%. We have conveyed this to all the institutions and made them agree to this," he added. "As a few medical tried to defend their demand for fee hike by showing hospital expenditure in the accounts."

**DH News Service**

### Fee panel has limited powers

Admitting that the fee regulatory committee has limited powers, Justice Shylendra Kumar said, "We can only recommend to the government to take penal action against the institution for not following their order, but we are not authorised to take any action against them. Our duty is to regulate fees according to the guidelines and we will stick to it." However, he added that they had cracked down on many deemed universities and private colleges in the state charging exorbitantly and looting in the name of donations.

# ಲೆಕ್ಕ ಸಲ್ಲಿಸದ 82 ಶಿಕ್ಷಣ ಸಂಸ್ಥೆಗಳ ಶುಲ್ಕ ಹೆಚ್ಚಳಕ್ಕೆ ನಿರ್ಬಂಧ

**ವಿಕ ಸುದ್ದಿಲೋಕ** ಬೆಂಗಳೂರು

ಇದುವರೆಗೆ ಪಾರದರ್ಶಕವಾಗಿ ಲೆಕ್ಕಪತ್ರ ಸಲ್ಲಿಸದ 82 ಖಾಸಗಿ ವೃತ್ತಿಪರ ಶಿಕ್ಷಣ ಸಂಸ್ಥೆಗಳು ಈ ವರ್ಷ ಶೇ 8ರಷ್ಟು ಪ್ರವೇಶ ಶುಲ್ಕ ಹೆಚ್ಚಿಸಲು ಅವಕಾಶವಿಲ್ಲ ಎಂದು ಹೇಳಿ ನ್ಯಾ.ಡಿ.ವಿ. ಶೈಲೇಂದ್ರಕುಮಾರ್ ನೇತೃತ್ವದ ಶುಲ್ಕ ನಿಯಂತ್ರಣ ಸಮಿತಿ ಮತ್ತೊಮ್ಮೆ ಚಾಟಿ ಬೀಸಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸಭಾಂಗಣದಲ್ಲಿ ಬುಧವಾರ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶುಲ್ಕ ನಿಯಂತ್ರಣ ಸಮಿತಿಯ ಅಧ್ಯಕ್ಷ ನ್ಯಾ. ಶೈಲೇಂದ್ರಕುಮಾರ್, ''ಲೆಕ್ಕಪತ್ರ ಸಲ್ಲಿಸಿದ ಡೀಮ್ಡ್ ವಿವಿಗಳು ಹಾಗೂ ಖಾಸಗಿ ಕಾಲೇಜುಗಳು ಮಾತ್ರ ಈ ವರ್ಷ ಶೇ 8ರಷ್ಟು ಪ್ರವೇಶ ಶುಲ್ಕ ಹೆಚ್ಚಿಸಬಹುದು'' ಎಂದು ಹೇಳಿದರು.

''ಡೀಮ್ಡ್ ವಿವಿಗಳಲ್ಲಿ ಕಳೆದ ವರ್ಷ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ 6.32 ಲಕ್ಷ ರೂ. ಶುಲ್ಕ ನಿಗದಿಪಡಿಸಲಾಗಿತ್ತು. ಲೆಕ್ಕಪತ್ರ ಸಲ್ಲಿಸಿದ ವಿವಿಗಳಿಗೆ ಈ ವರ್ಷ 6.83 ಲಕ್ಷ ರೂ. ಶುಲ್ಕ ಪಡೆಯಲು ಅವಕಾಶ ನೀಡಲಾಗಿದೆ. ಆದರೆ, ಬಹುತೇಕ ಖಾಸಗಿ ವೈದ್ಯ ಕಾಲೇಜುಗಳು 8ರಿಂದ 9 ಲಕ್ಷ ರೂ. ಶುಲ್ಕ ವಸೂಲಿ ಮಾಡುತ್ತಿವೆ. ಅಲ್ಲದೆ, ನೈಜವಾದ ಲೆಕ್ಕಪತ್ರಗಳನ್ನು ಸಲ್ಲಿಸುತ್ತಿಲ್ಲ'' ಎಂದು ಅವರು ಆರೋಪಿಸಿದರು.

''ಕಳೆದ ವರ್ಷ 1 ಕೋಟಿ ಆದಾಯ ಗಳಿಸಿದ ಕಾಲೇಜುಗಳು ಈ ವರ್ಷ 1.5 ಕೋಟಿ ರೂ. ಆದಾಯ ಮಾಡಲು ಹೊರಟಿವೆ. ಬಹಳಷ್ಟು ಕಾಲೇಜುಗಳು ನಷ್ಟದ ನೆಪದಲ್ಲಿ ವಿದ್ಯಾರ್ಥಿಗಳಿಂದ ಹೆಚ್ಚಿನ ಶುಲ್ಕ ಸಂಗ್ರಹಿಸುವುದು ಅನಿವಾರ್ಯ ಎಂಬ ಸಬೂಬು ನೀಡಿವೆ'' ಎಂದು ದೂರಿದರು.

**ಆಸ್ಪತ್ರೆ ಖರ್ಚಿಗಷ್ಟೆ, ಆದಾಯ ಲೆಕ್ಕಕ್ಕಿಲ್ಲ:** ''ಬಹುತೇಕ ಖಾಸಗಿ ವೈದ್ಯ ಹಾಗೂ ದಂತ ವೈದ್ಯ ಕಾಲೇಜುಗಳಿಗೆ ಹೊಂದಿಕೊಂಡಂತೆ ಆಸ್ಪತ್ರೆಗಳನ್ನೂ ನಡೆಸಲಾಗುತ್ತಿದೆ. ಆದರೆ, ಆಸ್ಪತ್ರೆಗಳ ಖರ್ಚು ತೋರಿಸುವ ಕಾಲೇಜಿನ ಆಡಳಿತ ಮಂಡಳಿ, ಆದಾಯ ಮೂಲ ತೋರಿಸುತ್ತಿಲ್ಲ. ಇನ್ನು ಎನ್‌ಆರ್‌ಐ ಕೋಟಾದಡಿ ಸೀಟು ಭರ್ತಿ ಮಾಡುವಾಗ ಸಂಗ್ರಹಿಸುವ ಶುಲ್ಕವನ್ನು ಎಸ್‌ಸಿ, ಎಸ್‌ಟಿ ಹಾಗೂ ಓಬಿಸಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕಾಗಿ ವಿನಿಯೋಗಿಸುವುದಾಗಿ ಹೇಳುತ್ತಿವೆ. ಆದರೆ, ಈ ಉದ್ದೇಶಕ್ಕೆ ಶುಲ್ಕ ಸದ್ಬಳಕೆಯಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಖಾಸಗಿ ವೈದ್ಯ ಕಾಲೇಜುಗಳು ಮೊತ್ತವನ್ನು ಸರಕಾರಕ್ಕೆ ಹಿಂತಿರುಗಿಸಬೇಕು'' ಎಂದು ಸೂಚಿಸಿದರು.

''ಡೀಮ್ಡ್ ವಿವಿಗಳು ಮತ್ತು ಖಾಸಗಿ ವೃತ್ತಿಪರ ಕಾಲೇಜುಗಳು ಕೂಡ ಶುಲ್ಕ ನಿಯಂತ್ರಣ ಸಮಿತಿ ವ್ಯಾಪ್ತಿಗೆ ಬರಲಿವೆ. ರಾಜ್ಯದ 15 ಡೀಮ್ಡ್ ವಿವಿಗಳು ಮತ್ತು ಖಾಸಗಿ ಕಾಲೇಜುಗಳಿಗೆ ನೋಟಿಸ್ ನೀಡಲಾಗಿದೆ'' ಎಂದು ತಿಳಿಸಿದರು.

''ವಿದ್ಯಾರ್ಥಿಗಳಿಂದ ಹೆಚ್ಚುವರಿ ಶುಲ್ಕ ಸಂಗ್ರಹಿಸಿರುವ ಆರೋಪದ ಮೇರೆಗೆ ಕೆಲ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಿಗೆ ನೋಟಿಸ್ ಜಾರಿಗೊಳಿಸಲಾಗಿದೆ'' ಎಂದು ತಿಳಿಸಿದರು.

> **ಶಿಕ್ಷಣ ಲಾಭದಾಯಕ ಉದ್ಯಮವಲ್ಲ, ಅದು ಸಾಮಾಜಿಕ ಜವಾಬ್ದಾರಿ ಹಾಗೂ ಪ್ರತಿಭಾನ್ವಿತರಿಗೆ ಅನ್ಯಾಯವಾಗಬಾರದು ಎಂದು ಸುಪ್ರೀಂಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಇದರಲ್ಲಿ ಶೇ 1ರಷ್ಟು ಅನ್ಯಾಯವಾಗಲು ಕೂಡ ಅವಕಾಶವಿಲ್ಲ**
>
> **- ನ್ಯಾ.ಡಿ.ವಿ. ಶೈಲೇಂದ್ರಕುಮಾರ್,**
> ಅಧ್ಯಕ್ಷರು, ಶುಲ್ಕ ನಿಯಂತ್ರಣ ಸಮಿತಿ

SDUAHER

ವಿಜಯ ಕರ್ನಾಟಕ



## ವೈದ್ಯರ ಮೇಲಿನ ಹಲ್ಲೆ ತಡೆಗೆ ಪರಿಣಾಮಕಾರಿ ಕಾಯಿದೆ ಜಾರಿ: ಕುಮಾರಸ್ವಾಮಿ

# ವೈದ್ಯರಿಗೆ ಗ್ರಾಮೀಣ ಸೇವೆ ಕಡ್ಡಾಯ

**ವಿಕ ಸುದ್ದಿಲೋಕ** ಬೆಂಗಳೂರು

ವೈದ್ಯರ ರಕ್ಷಣೆ ಸರಕಾರದ ಜವಾಬ್ದಾರಿಯಾಗಿದ್ದು, ವೈದ್ಯರ ಮೇಲಿನ ಹಲ್ಲೆ ತಪ್ಪಿಸಲು ಈಗಾಗಲೇ ಇರುವ ಕಾಯಿದೆಯನ್ನೇ ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುವುದು ಎಂದು ಸಿಎಂ ಎಚ್.ಡಿ. ಕುಮಾರಸ್ವಾಮಿ ಹೇಳಿದರು.


ಜಯದೇವ ಹೃದಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ನೂತನವಾಗಿ ಆರಂಭಿಸಿರುವ ಕಾರ್ಡಿಯಾಕ್ ಎಂಆರ್‌ಐ ಸ್ಕ್ಯಾನಿಂಗ್ ಘಟಕವನ್ನು ಬುಧವಾರ ಉದ್ಘಾಟಿಸಿ, ''ಸಾವು ಯಾರ ಕೈಯಲ್ಲೂ ಇಲ್ಲ. ಆದರೆ ರೋಗಿ ಮೃತಪಟ್ಟರೆ ಅದಕ್ಕೆ ವೈದ್ಯರೇ ಕಾರಣ ಎಂದು ಅವರ ಮೇಲೆ ಹಲ್ಲೆ ನಡೆಸುವುದು ಸರಿಯಲ್ಲ,'' ಎಂದರು.

**ವೈದ್ಯರಿಗೆ ಗ್ರಾಮೀಣ ಸೇವೆ ಕಡ್ಡಾಯ**

''ಸರಕಾರಿ ಕೋಟಾದಡಿ ವೈದ್ಯ ಸೀಟು ಪಡೆದವರು ಒಂದು ವರ್ಷ ಕಡ್ಡಾಯವಾಗಿ ಗ್ರಾಮೀಣದಲ್ಲಿ ಸೇವೆ ಸಲ್ಲಿಸಬೇಕು. ಈ ಸಂಬಂಧ ಅಗತ್ಯ ಕಾಯಿದೆ ರೂಪಿಸಲಾಗುವುದು,''ಎಂದರು.

**ಜಿಲ್ಲಾ ಆರೋಗ್ಯಾಧಿಕಾರಿಗಳ ಸಭೆ**

ಗ್ರಾಮೀಣ ಪ್ರದೇಶದ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಜಿಲ್ಲಾ ಆರೋಗ್ಯ ಅಧಿಕಾರಿಗಳ (ಡಿಎಚ್‌ಒ) ಸಭೆ ಕರೆಯಲಾಗಿದೆ,'' ಎಂದು ಅವರು ಹೇಳಿದರು.



ಬೆಂಗಳೂರಿನ ಜಯದೇವ ಆಸ್ಪತ್ರೆಯಲ್ಲಿ ಕಾರ್ಡಿಯಾಕ್ ಎಂಆರ್‌ಐ ಘಟಕವನ್ನು ಸಿಎಂ ಎಚ್.ಡಿ.ಕುಮಾರಸ್ವಾಮಿ ಬುಧವಾರ ಉದ್ಘಾಟಿಸಿದರು. ಸಚಿವ ಡಿ.ಕೆ. ಶಿವಕುಮಾರ್, ಶಾಸಕಿ ಸೌಮ್ಯಾ ರೆಡ್ಡಿ, ಸಂಸ್ಥೆಯ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ್ ಉಪಸ್ಥಿತರಿದ್ದರು.

### ಏನಿದು ಎಂಆರ್‌ಐ ಘಟಕ

''ಖಾಸಗಿ ಸಾರ್ವಜನಿಕ ಸಹಭಾಗಿತ್ವ (ಪಿಪಿಪಿ)ದಲ್ಲಿ ಎಂಆರ್‌ಐ ಸ್ಕ್ಯಾನಿಂಗ್ ಸೆಂಟರ್ ಆರಂಭಿಸಿದ್ದು, ಇದಕ್ಕೆ ಹೈದರಾಬಾದ್‌ನ ಮ್ಯಾಕ್ಸಿಕ್ಯೂರ್ ಕಂಪನಿ ಹೂಡಿಕೆ ಮಾಡಿದೆ. ರೋಗಿಗಳಿಗೆ ಸೇವೆ ಮತ್ತು ನಿರ್ವಹಣೆಯನ್ನೂ ಕಂಪನಿಯೇ ವಹಿಸಲಿದೆ. ಕೇಂದ್ರದಲ್ಲಿ ಕೇವಲ ಹೃದಯಕ್ಕೆ ಅಷ್ಟೇ ಅಲ್ಲ, ಮಿದುಳು ಸೇರಿದಂತೆ ಎಲ್ಲ ಬಗೆಯ ಸಮಸ್ಯೆಗಳಿಗೂ ಸ್ಕ್ಯಾನಿಂಗ್ ಮಾಡಿಸಿಕೊಳ್ಳಬಹುದಾಗಿದೆ. ಕೇವಲ 2 ರಿಂದ 2,500 ರೂ.ಗಳಿಗೆ ಸೌಲಭ್ಯ ದೊರೆಯಲಿದ್ದು, ಬಡವರಿಗೆ ಉಚಿತವಾಗಿ ಮಾಡಲಾಗುವುದು.ಬೇರೆ ಆಸ್ಪತ್ರೆಯ ರೋಗಿಗಳೂ ಸಹ ಈ ಸೌಲಭ್ಯ ಪಡೆದುಕೊಳ್ಳಬಹುದಾಗಿದೆ,'' ಎಂದು ಡಾ. ಸಿ.ಎನ್. ಮಂಜುನಾಥ್ ಮಾಹಿತಿ ನೀಡಿದರು.

ಹೆಚ್ಚುತ್ತಿರುವ ಹೃದಯ ಸಮಸ್ಯೆಗಳಿಗೆ ವಾಯುಮಾಲಿನ್ಯ ಕಾರಣ ಎನ್ನಲಾಗಿದ್ದು, 500 ಮಂದಿ ಸಂಚಾರಿ ಪೊಲೀಸರ ಆರೋಗ್ಯ ತಪಾಸಣೆ ನಡೆದಿದೆ. ಆಟೊ ಚಾಲಕರನ್ನೂ ತಪಾಸಣೆ ನಡೆಸಿದ ನಂತರ ವರದಿ ಸಿದ್ಧಪಡಿಸಿ ಸರಕಾರಕ್ಕೆ ನೀಡಲಾಗುವುದು

**- ಡಾ. ಸಿ.ಎನ್. ಮಂಜುನಾಥ್**, ನಿರ್ದೇಶಕ, ಜಯದೇವ ಆಸ್ಪತ್ರೆ

ನನಗೇನು ವೈದ್ಯಕೀಯ ಶಿಕ್ಷಣ ಸಚಿವ ಸ್ಥಾನ ಆಗಬೇಕೆಂದು ಆಸೆ ಇರಲಿಲ್ಲ, ಪಕ್ಷದವರು ನೀರಾವರಿ ಸಚಿವರಾಗುವಂತೆ ಸೂಚಿಸಿದರು. ಹುಟ್ಟುತ್ತಲೇ ನಾನು ಕೃಷಿಕ, ವೃತ್ತಿಯಲ್ಲಿ ಉದ್ಯಮಿ, ಆಯ್ಕೆಯಲ್ಲಿ ಶಿಕ್ಷಣ ನನ್ನನ್ನು ಸೆಳೆಯಿತು. ಕನಕಪುರಕ್ಕೆ ವೈದ್ಯಕೀಯ ಕಾಲೇಜು ತರಬೇಕು ಎಂಬ ಕನಸಿದ್ದರಿಂದ ಅದಕ್ಕೆ ಒಪ್ಪಿದೆ

**-ಡಿ.ಕೆ.ಶಿವಕುಮಾರ್** ಸಚಿವ

**ಕೌಶಲ್ಯ ಅಭಿವೃದ್ಧಿ ಕೋರ್ಸ್:** ವೈದ್ಯಕೀಯ ಶಿಕ್ಷಣ ಸಚಿವ ಡಿ.ಕೆ. ಶಿವಕುಮಾರ್, ''ರಾಜ್ಯದಲ್ಲಿ ಪದವಿ ಪಡೆದ ವೈದ್ಯರನ್ನು ಇಲ್ಲಿಯೇ ಉಳಿಸಿಕೊಂಡು ಬೆಂಗಳೂರನ್ನು ವೈದ್ಯಕೀಯ ಟೂರಿಸಂ ಮಾಡಲು ನಿಯಮ ಜಾರಿಗೆ ತರಲು ಸಿದ್ಧತೆ ನಡೆದಿದೆ,''ಎಂದರು.

''ವಿದೇಶಗಳಂತೆ ಆಸ್ಪತ್ರೆಗಳಲ್ಲಿ ವೈದ್ಯ ಸಹಾಯಕ ಸಿಬ್ಬಂದಿಗೆ ಹೆಚ್ಚು ಮಹತ್ವ ನೀಡಲು ಎಸ್ಸೆಸ್ಸೆಲ್ಸಿ ಮುಗಿಸಿದ ಅಭ್ಯರ್ಥಿಗಳಿಗೆ ಕೌಶಲ ಅಭಿವೃದ್ಧಿ ಕೋರ್ಸ್ ಆರಂಭಿಸಲಾಗುತ್ತಿದೆ,'' ಎಂದರು.

ಸಂಯುಕ್ತ ಕರ್ನಾಟಕ



# ಡೀಮ್ಡ್ ವಿವಿ, ಖಾಸಗಿ ಕಾಲೇಜುಗಳಿಗೆ ಮೂಗುದಾರ

ಸಂ.ಕ. ಸಮಾಚಾರ ಬೆಂಗಳೂರು

ವೃತ್ತಿಪರ ಕೋರ್ಸುಗಳ ಶುಲ್ಕ ನಿಯಂತ್ರಣ ಸಮಿತಿ ತಗೆದುಕೊಂಡ ಶುಲ್ಕ ನಿಗದಿಯ ಕಟ್ಟು ನಿಟ್ಟಿನ ನಿರ್ಧಾರದಿಂದಾಗಿ ವೃತ್ತಿಪರ ಕೋರ್ಸುಗಳನ್ನು ನಡೆಸುತ್ತಿರುವ ಡೀಮ್ಡ್ ಹಾಗೂ ಖಾಸಗಿ ವೃತ್ತಿಪರ ಕಾಲೇಜುಗಳಿಗೆ ಮೂಗುದಾರ ಹಾಕಿದಂತಾಗಿದೆ.

ಈ ಮುಂಚೆ ಅವರು ನಿಗದಿ ಪಡಿಸಿದ್ದಷ್ಟೇ ಶುಲ್ಕವನ್ನು ಭರಿಸಬೇಕಿತ್ತು. ಆದರೆ ಸಮಿತಿ ಈ ಬಾರಿ ಶೇ 8 ರಷ್ಟು ಮಾತ್ರ ಹೆಚ್ಚಿಗೆ ಮಾಡಬೇಕು ಎಂದು ಹೊರಡಿಸಿದ ಫರ್ಮಾನು ಅಂತಹ ಕಾಲೇಜುಗಳಿಗೆ ಬಿಸಿತುಪ್ಪವಾಗಿ ಪರಿಣಮಿಸಿದೆ.

ಡೀಮ್ಡ್ ಹಾಗೂ ಖಾಸಗಿ ಕಾಲೇಜುಗಳಿಗೆ ಶುಲ್ಕ ನಿಗದಿ ಮಾಡುವ ಅಧಿಕಾರ ಸಮಿತಿಗೆ ಇದೆ. ಮೂರು ವರ್ಷಗಳ ಲೆಕ್ಕಪತ್ರ ನೀಡಿ ಎಂದು ಹೇಳಿದರೂ ಹಲವು ಕಾಲೇಜುಗಳು ಸಮಿತಿ ಮುಂದೆ ಹಾಜರಾಗಿ ತಮ್ಮ ಕಾಲೇಜುಗಳ ಲೆಕ್ಕಪತ್ರ, ಯೋಜನಾವೆಚ್ಚದ ವರದಿಯನ್ನು ಇನ್ನೂವರೆಗೆ ಸಲ್ಲಿಸಿಲ್ಲ ಎಂದು ವೃತ್ತಿ ಶಿಕ್ಷಣ ಶುಲ್ಕ ನಿಗದಿ ಸಮಿತಿ ಅಧ್ಯಕ್ಷ ನ್ಯಾ. ಡಿವಿ. ಶೈಲೇಂದ್ರಕುಮಾರ್ ತಿಳಿಸಿದ್ದಾರೆ.



ಕೆಲ ಕಾಲೇಜಿನವರು ಯೋಜನಾವೆಚ್ಚವನ್ನು ಹೆಚ್ಚಿಗೆ ತೋರಿಸುವ ಮೂಲಕ ನಮ್ಮ ಕಾಲೇಜುಗಳು ನಷ್ಟದಲ್ಲಿವೆ ಎಂದು ತೋರಿಸಿದ್ದಾರೆ. ಶುಲ್ಕವನ್ನು ಶೇ 8ಕ್ಕಿಂತ ಹೆಚ್ಚಿಗೆ ಮಾಡಿ ಎಂದು ಮನವಿ ಮಾಡಿದ್ದಾರೆ. ಆದರೆ ಕೆಲವು ಕಾಲೇಜುಗಳು ವಿಧಿಸಿದ ಶುಲ್ಕಕ್ಕಿಂತ ಕಡಿಮೆ ಶುಲ್ಕವನ್ನು ತೆಗೆದುಕೊಂಡಿವೆ.

ರಾಜ್ಯದಲ್ಲಿನ ಕೆಲವೊಂದು ವೈದ್ಯಕೀಯ, ದಂತವೈದ್ಯಕೀಯ ಕಾಲೇಜುಗಳು ಆಸ್ಪತ್ರೆಗಳನ್ನು ಹೊಂದಿದ್ದು ಅಂತಹ ಕಾಲೇಜುಗಳು ಆಸ್ಪತ್ರೆಯ ಖರ್ಚು, ವೆಚ್ಚವನ್ನೂ ಸಹ ಯೋಜನಾವೆಚ್ಚದಲ್ಲಿ ಸೇರಿಸಿ ಸಮಿತಿಗೆ ನೀಡಿದ್ದು ಸಮಿತಿ ಅದನ್ನು ಸಾರಾಸಗಟಾಗಿ ತಳ್ಳಿಹಾಕಿದ್ದು ಶೇ 8 ರಷ್ಟು ಮಾತ್ರ ಶುಲ್ಕ ಹೆಚ್ಚಿಸಬಹುದು ಎಂದು ಕಟ್ಟುನಿಟ್ಟಾಗಿ ಹೇಳಿದೆ.

ಖಾಸಗಿ ಕಾಲೇಜುಗಳ ಆಡಳಿತ ಮಂಡಳಿ ಈಗಾಗಲೇ ಶೇ 8 ಕ್ಕಿಂತ ಹೆಚ್ಚು ಶುಲ್ಕ ನಿಗದಿ ಮಾಡಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿಕೊಂಡಿವೆ. ಆದರೆ ಸಮಿತಿ ಸುಪ್ರೀಂ ಕೋರ್ಟಿನ ಆದೇಶದ ಮೇಲೆ ಕೆಲಸ ಮಾಡುತ್ತಿದ್ದು ಸರ್ಕಾರವೂ ಸಹ ಸಮಿತಿಗೆ ಆದೇಶ ನೀಡಲು ಬರುವುದಿಲ್ಲ.

ಎನ್‌ಆರ್‌ಐ ವಿದ್ಯಾರ್ಥಿಗಳಿಗೆ 10 ಪಟ್ಟು ಹೆಚ್ಚು ತೆಗೆದುಕೊಂಡ ಶುಲ್ಕವನ್ನು ಪ್ರೋತ್ಸಾಹಧನ, ಸಹಾಯಧನ, ಪರಿಶಿಷ್ಟ ಜಾತಿ ಮತ್ತು ಪಂಗಡದ ಅರ್ಹ ಫಲಾನುಭವಿಗಳಿಗೆ ನೀಡಬೇಕು ಎಂದು ಸಮಿತಿ ಕಾಲೇಜುಗಳಿಗೆ ನಿರ್ದೇಶನ ನೀಡಿದೆ.

ಸಂಯುಕ್ತ ಕರ್ನಾಟಕ



# ಹಳ್ಳಿ ಸೇವೆ ಕಡ್ಡಾಯ

# ವೈದ್ಯರ ರಕ್ಷಣೆಗೆ ಕಾನೂನು

**ಸಂ.ಕ ಸಮಾಚಾರ ಬೆಂಗಳೂರು**

ವೈದ್ಯರಿಗೆ ಗ್ರಾಮೀಣ ಸೇವೆ ಹಾಗೆಯೇ ಅವರ ಮೇಲೆ ದಬ್ಬಾಳಿಕೆ ನಡೆಸುವುದರ ವಿರುದ್ಧವೂ ಕಾನೂನು ರಕ್ಷಣೆ ಒದಗಿಸಲು ನೂತನ ಕಾನೂನು ಜಾರಿಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ 'ಎಂಆರ್‌ಐ' ಕೇಂದ್ರ ಉದ್ಘಾಟಿಸಿ ಮತನಾಡಿ, ಸರ್ಕಾರಿ ಕೋಟಾದಡಿ ವೈದ್ಯಕೀಯ ಸೀಟು ಪಡೆದವರಿಗೆ ಒಂದು ವರ್ಷ ಗ್ರಾಮೀಣ ಸೇವೆ ಸಲ್ಲಿಕೆ ಕಡ್ಡಾಯ ಮಾಡಲಾಗುವುದು. ವೈದ್ಯರ ಸೇವೆ ನಗರ ಪ್ರದೇಶಕಷ್ಟೇ ಸೀಮಿತವಲ್ಲ. ಹಳ್ಳಿಗಳಲ್ಲಿಯೂ ಆರೋಗ್ಯ ಸೇವೆ ಸೇವೆ ಲಭ್ಯವಾಗಬೇಕು. ಗ್ರಾಮೀಣ ಭಾಗದಲ್ಲೂ ಒಳ್ಳೊಳ್ಳೆ ಕಟ್ಟಡವಿರುವ ಆಸ್ಪತ್ರೆಗಳಿವೆ ಎಂದರು.

> **ಮುಂ**ಬರುವ ವರ್ಷದಿಂದ ನೀಟ್ ಪರೀಕ್ಷೆಯಲ್ಲಿ ಪಾಸಾದ ಕನ್ನಡಿಗರಿಗೆ ಶೇ.40ರಷ್ಟು ಸೀಟು ಕಾಯ್ದಿರಿಸಲು ನಿರ್ಧರಿಸಲಾಗಿದೆ.
>
> **-ಡಿ.ಕೆ. ಶಿವಕುಮಾರ್,**
> ವೈದ್ಯಕೀಯ ಸಚಿವ

ಗ್ರಾಮೀಣ ಪ್ರದೇಶಗಳಲ್ಲಿ ಕೆಲಡ ಮಾಡಲು ವೈದ್ಯರು ಹಿಂದೇಟು ಹಾಕುತ್ತಿದ್ದಾರೆ. ಹಲವರು ರಾಜೀನಾಮೆ ನೀಡಿ ನಗರದಡೆಗೆ ಮುಖ ಮಾಡುತ್ತಿದ್ದಾರೆ. ಇದಕ್ಕೆ ಗ್ರಾಮೀಣ ಪ್ರದೇಶದಲ್ಲಿನ ಜನಪ್ರತಿನಿಧಿಗಳೇ ಕಾರಣ. ವೈದ್ಯರ ಜೊತೆ ಅನುಚಿತವಾಗಿ ವರ್ತಿಸುತ್ತಿರುವುದನ್ನು ತಡೆಗಟ್ಟಲೂ ಕಾನೂನು ರೂಪಿಸಲಾಗುವದು ಎಂದು ಹೇಳಿದರು. ಸಚಿವ ಡಿಕೆ ಶಿವಕುಮಾರ ಮಾತನಾಡಿ, ಗ್ರಾಮೀಣ ಪ್ರದೇಶಕ್ಕೆ ಹೋಗಲು ವೈದ್ಯರು ಸಿದ್ಧರಿಲ್ಲ. ಹೀಗಾಗಿ ಕಾನೂನು ತರುವುದು ಅನಿವಾರ್ಯವಾಗಿದೆ. ಮುಂಬರುವ ವರ್ಷದಿಂದ ನೀಟ್ ಪರೀಕ್ಷೆಯಲ್ಲಿ ಕನ್ನಡಿಗರಿಗೆ ಹೆಚ್ಚಿನ ವೈದ್ಯಕೀಯ ಸೀಟು ಲಭ್ಯವಾಗುವಂತೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು.

ಸಂಯುಕ್ತ ಕರ್ನಾಟಕ



# ಹೆಚ್ಚಿನ ಶುಲ್ಕ ವಸೂಲಿಗೆ ಕೆಂಡ ಕಾಲೇಜುಗಳಿಗೆ ನೋಟಿಸ್

**ಸಂ.ಕ. ಸಮಾಚಾರ ಬೆಂಗಳೂರು**

ನಿಯಮ ಉಲ್ಲಂಘಿಸಿ ವೃತ್ತಿಪರ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳಿಂದ ಹೆಚ್ಚಿನ ಶುಲ್ಕ ತೆಗೆದುಕೊಂಡ ಎರಡು ಕಾಲೇಜುಗಳಿಗೆ ನೋಟಿಸ್ ನೀಡಲಾಗಿದೆ ಎಂದು ವೃತ್ತಿಪರ ಕೋರ್ಸ್ ನಿಯಂತ್ರಣ ಸಮಿತಿ ಅಧ್ಯಕ್ಷ ನ್ಯಾ. ಶೈಲೇಂದ್ರ ಕುಮಾರ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನ ರೇವಾ ಹಾಗೂ ಟಿ. ಜಾನ್ ಕಾಲೇಜುಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ನಮ್ಮ ಸಮಿತಿ ನಿಗದಿ ಪಡಿಸಿದ ಶೇ 8 ರಷ್ಟು ಮಾತ್ರ ಹೆಚ್ಚು ಶುಲ್ಕವನ್ನು ತೆಗೆದುಕೊಳ್ಳಬಹುದು ಆದರೆ ಈ ಕಾಲೇಜುಗಳಲ್ಲಿ ಹೆಚ್ಚಿನ ಶುಲ್ಕ ಆಕರಿಸುವ ದೂರು ಬಂದ ಹಿನ್ನೆಲೆಯಲ್ಲಿ ಆ ಕಾಲೇಜುಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದರು.

ಕಾನೂನು ಪ್ರಕಾರ ಸಮಿತಿ ನೋಟಿಸ್ ಜಾರಿ ಮಾಡಬಹುದೇ ವಿನಃ ಯಾವುದೇ ಕ್ರಮ ತೆಗೆದುಕೊಳ್ಳುವ ಅಧಿಕಾರವಿಲ್ಲ. ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೇವೆ. ಕಾಲೇಜುಗಳ ಮೇಲೆ ಕ್ರಮ ತೆಗೆದುಕೊಳ್ಳುವುದು ಸರ್ಕಾರಕ್ಕೆ ಬಿಟ್ಟ ವಿಷಯ. ಒಂದು ವೇಳೆ ಸರ್ಕಾರವೂ ಕ್ರಮ ತೆಗೆದುಕೊಳ್ಳದಿದ್ದರೆ ವಿದ್ಯಾರ್ಥಿಗಳು ನ್ಯಾಯಾಲಯದ ಮೊರೆ ಹೋಗಬಹುದು ಎಂದು ತಿಳಿಸಿದರು.

ಕಾಲೇಜುಗಳವರಿಗೆ ಮೂರು ವರ್ಷಗಳ ಲೆಕ್ಕಪತ್ರ ನೀಡುವಂತೆ ಹೇಳಿದ್ದರೂ ಕೆಲವೊಂದು ಕಾಲೇಜುಗಳು ಮಾತ್ರ ನೀಡಿವೆ. ಹಲವು ಕಾಲೇಜುಗಳವರು ಯೋಜನಾವೆಚ್ಚ ಹೆಚ್ಚಿಗೆ ತೋರಿಸಿ ತಪ್ಪಿಸಿಕೊಳ್ಳಲು ನೋಡುತ್ತಿದ್ದಾರೆ. ಆದರೆ ಹಾಗೆ ಆಗುವುದಿಲ್ಲ ಸಮಿತಿ ನಿಗದಿ ಪಡಿಸಿದ ಶುಲ್ಕವನ್ನು ಮಾತ್ರ ತೆಗೆದುಕೊಳ್ಳಬೇಕು ಎಂದರು.

## ಕಾಲೇಜುಗಳ ವಿವರ ಹೀಗಿದೆ

| ಕೋರ್ಸುಗಳು | ಒಟ್ಟು ಕಾಲೇಜುಗಳು | ಲೆಕ್ಕಪತ್ರ ನೀಡಿದ ಕಾಲೇಜು | ನೀಡಿಲ್ಲ |
|---|---|---|---|
| ಇಂಜಿನಿಯರಿಂಗ್ | 200 | 16 | 37 |
| ಡೆಂಟಲ | 36 | 32 | 4 |
| ಫಾರ್ಮಸಿ | 58 | 35 | 23 |
| ಮೆಡಿಕಲ್ | 30 | 27 | 3 |
| ಆಯುರ್ವೇದ | 55 | 43 | 13 |
| ಯುನಾನಿ | 3 | 3 | – |
| ಯೋಗಿಕ್ ಸೈನ್ಸ್ | 2 | 2 | – |
| ಹೋಮಿಯೋಪತಿ | 10 | 8 | 2 |

## ಲೆಕ್ಕ ನೀಡದ 82 ಕಾಲೇಜುಗಳಲ್ಲಿ ಶುಲ್ಕ ಹೆಚ್ಚಳ ಅವಕಾಶವಿಲ್ಲ

# ಡೀಮ್ಡ್, ಖಾಸಗಿ ವಿಶ್ವವಿದ್ಯಾಲಯಗಳು ಸಾರ್ವಭೌಮರಲ್ಲ: ನ್ಯಾ.ಶೈಲೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡೀಮ್ಡ್ ಮತ್ತು ಖಾಸಗಿ ವಿಶ್ವವಿದ್ಯಾಲಯಗಳು ಸಾರ್ವಭೌಮರಲ್ಲ. ಅಲ್ಲಿ ನಡೆಯುವ ವೃತ್ತಿಪರ ಕೋರ್ಸ್‌ಗಳ ಶುಲ್ಕ ನಿಗದಿ ಮಾಡುವ ಅಧಿಕಾರ ನಮಗಿದೆ' ಎಂದು ಶುಲ್ಕ ನಿಯಂತ್ರಣ ಸಮಿತಿ ಅಧ್ಯಕ್ಷ ನ್ಯಾಯಮೂರ್ತಿ ಡಿ.ವಿ. ಶೈಲೇಂದ್ರ ಕುಮಾರ್ ಹೇಳಿದ್ದಾರೆ.

ಈ ಸಂಸ್ಥೆಗಳು ಸ್ವಾಯುತ್ತತೆ ಹೊಂದಿದ್ದರೂ ಶುಲ್ಕ ನಿಗದಿ ಬೇಕಾಬಿಟ್ಟಿ ಮಾಡಲು ಸಾಧ್ಯವಿಲ್ಲ ಎಂದು ಅವರು ಬುಧವಾರ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.

ಖಾಸಗಿ ವಿ.ವಿಗಳು ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ ಕಾಯ್ದೆ– 2006 ಪ್ರಕಾರ ಪ್ರತಿ ವರ್ಷ ಲೆಕ್ಕಪತ್ರಗಳನ್ನು ನೀಡಬೇಕು. ಆದರೆ, ಈವರೆಗೆ ಯಾವುದೇ ಸಂಸ್ಥೆಗಳು

> ಹೆಚ್ಚು ಶುಲ್ಕ ಪಡೆದರೆ ಧೈರ್ಯದಿಂದ ವಿದ್ಯಾರ್ಥಿಗಳು ದೂರು ನೀಡಬೇಕು. ಸರ್ಕಾರ ಶಿಕ್ಷಣ ಸಂಸ್ಥೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಲೇಬೇಕು
>
> **ಡಿ.ವಿ.ಶೈಲೇಂದ್ರಕುಮಾರ್**
> ನ್ಯಾಯಮೂರ್ತಿ

ಲೆಕ್ಕವನ್ನು ತೋರಿಸಿಲ್ಲ. ಶುಲ್ಕ ನಿಯಂತ್ರಣ ಕಾಯ್ದೆ ಅನ್ವಯ ಆಗುವುದಿಲ್ಲ ಎಂದು ಅವರು ಹೇಳಲು ಸಾಧ್ಯವಿಲ್ಲ. ಶುಲ್ಕ ನಿಗದಿ ಅವರಿಗೂ ಅನ್ವಯ ಆಗುತ್ತದೆ ಎಂದರು.

ಒಂದು ವೇಳೆ ಸಮಿತಿಯ ಶಿಫಾರಸು ಜಾರಿ ಮಾಡದೇ ಇದ್ದರೆ, ಅಂತಹ ಸಂಸ್ಥೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಬಹುದಾಗಿದೆ. ₹ 10 ಲಕ್ಷದವರೆಗೆ ದಂಡ ವಿಧಿಸಲು ಅವಕಾಶವಿದೆ. ಶಿಕ್ಷಿಸುವ ಅಧಿಕಾರ ಸಮಿತಿಗಿಲ್ಲ. ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಶೈಲೇಂದ್ರ ಕುಮಾರ್ ಹೇಳಿದರು.

ಲೆಕ್ಕ ನೀಡದವರಿಗೆ ಪರಿಷ್ಕರಣೆ ಇಲ್ಲ: ರಾಜ್ಯದ 82 ವೃತ್ತಿಪರ ಶಿಕ್ಷಣ ಸಂಸ್ಥೆಗಳು ಲೆಕ್ಕಪತ್ರ ಸಲ್ಲಿಸದ ಕಾರಣ ಶುಲ್ಕ ಹೆಚ್ಚಳಕ್ಕೆ ಅವಕಾಶ ನೀಡಿಲ್ಲ ಎಂದು ಶೈಲೇಂದ್ರ ಕುಮಾರ್ ತಿಳಿಸಿದರು.

ಲೆಕ್ಕಪತ್ರಗಳನ್ನು ನೀಡಿದ ಶಿಕ್ಷಣ ಸಂಸ್ಥೆಗಳಿಗೆ ಶೇ 8 ರಷ್ಟು ಶುಲ್ಕ ಹೆಚ್ಚಳಕ್ಕೆ ಅವಕಾಶ ನೀಡಲಾಗಿದೆ ಎಂದು ಅವರು ತಿಳಿಸಿದರು.

ಅಚ್ಚರಿ ಎಂದರೆ, ಲೆಕ್ಕ ಕೊಟ್ಟಿರುವ ಸಂಸ್ಥೆಗಳೂ ಸರಿಯಾದ ಲೆಕ್ಕ ಕೊಟ್ಟಿಲ್ಲ. ತಮಗೆ ತೋಚಿದಂತೆ ಲೆಕ್ಕ ಒಪ್ಪಿಸಿದ್ದಾರೆ. ಸಾಕಷ್ಟು ಲೋಪಗಳಿವೆ. ವೇತನ ಮತ್ತು ನಿರ್ವಹಣೆ ಹೆಸರಿನಲ್ಲಿ ಉದ್ದೇಶಿತ ಖರ್ಚುಗಳನ್ನು ಶೇ 30 ರಿಂದ ಶೇ 100 ವರೆಗೆ ತೋರಿಸಿದ್ದಾರೆ. ಅದನ್ನು ಸಮಿತಿ ಒಪ್ಪಿಕೊಂಡಿಲ್ಲ. ಕಾಯ್ದೆಯಲ್ಲಿ ಇರುವಂತೆ ಗರಿಷ್ಠ ಶೇ 8 ರಷ್ಟು ಹೆಚ್ಚಿಸಲು ಅವಕಾಶ ನೀಡಿರುವುದಾಗಿ ಅವರು ತಿಳಿಸಿದರು.

### ಎರಡು ಕಾಲೇಜಿಗೆ ನೋಟಿಸ್

ಬೆಂಗಳೂರು ನಗರದ ಎರಡು ಶಿಕ್ಷಣ ಸಂಸ್ಥೆಗಳು ನಿಗದಿ ಮಾಡಿದ್ದಕ್ಕಿಂತ ₹ 50,000 ಅಧಿಕ ಶುಲ್ಕ ಪಡೆದಿರುವ ದೂರು ಬಂದಿದೆ. ಈ ಹಿನ್ನೆಲೆಯಲ್ಲಿ ಆ ಸಂಸ್ಥೆಗಳಿಗೆ ನೋಟಿಸ್ ನೀಡಲಾಗಿದೆ ಎಂದು ಶೈಲೇಂದ್ರ ಕುಮಾರ್ ತಿಳಿಸಿದರು.